(ಆ) ೧೯೮೪-೮೫ನೇ ಸಾಲಿನಲ್ಲಿ ಆದ ಒಟ್ಟು ವೆಚ್ಚ.—ರೂ. ೧೦,೦೬,೫೪,೭೮೪-೩.

ರೂ. ೬,೯೨,೦೯,೮೩೮--೧೫ (ಯೋಜನೆ)
ರೂ. ೩,೧೪,೪೪,೯೪೫--೯೮ (ಯೋಜನೇತರ)

ಒಟ್ಟು ರೂ. ೧೦,೦೬,೫೪,೭೮೪—೧೩

(೧)

ಸರ್ಕಾರಿ ಸಿಬ್ಬಂದಿ	ವೇತನ ಶ್ರೇಣಿ
(೧) ಬಾಲವಿಕಾಸ ಯೋಜನಾಧಿಕಾರಿ	ರೂ. ೯೨೦--೧೬೫೦
(೨) ಮೇಲ್ವಿಚಾರಿಕೆ	ರೂ. ೬೩೦--೧೨೦೦
(೩) ಲೆಕ್ಕಿಗರು	ರೂ. ೬೩೦--೧೨೦೦
(೪) ದ್ವಿತೀಯದರ್ಜೆಗುಮಾಸ್ತರು	ರೂ. ೪೯೦--೭೫೦
(೫) ವಾಹನ ಚಾಲಕರು	ರೂ. ೪೧೦--೬೦೦
(೬) ಸಾಲ್ಕನೇದರ್ಜೆ ನೌಕರರು	ರೂ. ೩೯೦--೫೫೦

ಗೌರವ ಕಾರ್ಯನಿರ್ವಾಹಕರು	ಗೌರವ ಸಂಭಾವನೆ
(೧) ಅಂಗನವಾಡಿ ಕಾರ್ಯಕರ್ತೆಯರು	ರೂ. ೨೫೦--೦೦ ಮಾಹೆ (ಎಸ್.ಎಸ್.ಎಲ್.ಸಿ. ತೇರ್ಗಡೆಯಾದವರಿಗೆ)
(೨) ಅಂಗನವಾಡಿ ಕಾರ್ಯಕರ್ತೆಯರು	ರೂ. ೨೦೦--೦೦ ಮಾಹೆ (ಎಸ್.ಎಸ್-ಎಲ್.ಸಿ. ಗಿಂತ ಕಡಿಮೆ ವಿದ್ಯಾರ್ಹತೆಯವರಿಗೆ)
(೩) ಅಂಗನವಾಡಿ ಸಹಾಯಕಿಯರು	ರೂ. ೯೦--೦೦ ಮಾಹೆ

ರಾಜ್ಯದಲ್ಲಿ ಗಂಧದ ಮರಗಳ ಸಂರಕ್ಷಣೆ

೭೩೬ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

೧) ರಾಜ್ಯದಲ್ಲಿ ಗಂಧದ ಮರಗಳ ಸಂಖ್ಯೆಯು ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಕಳೆದ ವರ್ಷಗಳಲ್ಲಿ ಗಂಧದ ಮರಗಳ ಉತ್ಪಾದನೆ ಎಷ್ಟು ; ಹಾಗೂ ಎಷ್ಟು ಎಕರೆಗಳಲ್ಲಿ ಹೊಸದಾಗಿ ಮರಗಳನ್ನು ನೀಡಲಾಗಿದೆ ;

೩) ಗಂಧದ ಮರದ ಅಭಾವದಿಂದ ಕರಕುಶಲ ಕಲೆಗಾರರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

೪) ಹಾಗಿದ್ದಲ್ಲಿ ಸರ್ಕಾರದವರು ಆ ಬಗ್ಗೆ ಕೈಗೊಳ್ಳಲಾಗಿರುವ ಪರಿಹಾರ ಕಾರ್ಯಗಳಾವುವು ?

ಶ್ರೀ ಜಿ. ವಿಜಯ ಬಿ. ಎ. (ಅರಣ್ಯ ರಾಜ್ಯ ಮಂತ್ರಿಗಳು).—

೧) ಹೌದು.

೨) ರಾಜ್ಯದಲ್ಲಿ ಕಳೆದ ೫ ವರ್ಷಗಳಲ್ಲಿ ಗಂಧದ ಮರ (ತಿರುಳು ಮರ)ದ ಉತ್ಪಾದನೆಯು ಈ ಕೆಳ ಕಂಡಂತಿದೆ.—

ವರ್ಷ	ಉತ್ಪಾದನೆ (ಟನುಗಳಲ್ಲಿ)
೧೯೮೦-೮೧	೫೯೪-೮೬
೧೯೮೧-೮೨	೫೯೪-೩೧
೧೯೮೨-೮೩	೭೫೬-೪೭
೧೯೮೩-೮೪	೬೨೮-೯೦
೧೯೮೪-೮೫	೭೦೦-೦೦ (ಅಂದಾಜು)

ರಾಜ್ಯದಲ್ಲಿ ಕಳೆದ ೫ ವರ್ಷಗಳಲ್ಲಿ ಹೊಸದಾಗಿ ಬೆಳೆಸಿದ ನೆಡುತೋಪುಗಳ ವಿವರವು ಈ ಕೆಳ ಕಂಡತಿದೆ.—

ವರ್ಷ	ಪ್ಲಾಂಟೇಷನ್ ಬೆಳೆಸಿದ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
೧೯೮೦-೮೧	ಇಲ್ಲ
೧೯೮೧-೮೨	೫೩೨
೧೯೮೨-೮೩	೫೩೧
೧೯೮೩-೮೪	೩೨೮
೧೯೮೪-೮೫	೧೦೧೩

೩) ಹೌದು.

೪ ಪ್ರಸ್ತುತ ದೊರೆಯುತ್ತಿರುವ ಘಟಬುದ್ಲಾ ಗುಣಮಟ್ಟದ ಗಂಧದ ಮರವನ್ನು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮಕ್ಕಾಗಿ ಮೀಸಲಿರಿಸಲಾಗಿದೆ. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕೊರತೆಯಿಂದ ಗಂಧದ ಮರವನ್ನು ಸಾರ್ವಜನಿಕ ಹರಾಜು ಇರುವ ತಮಿಳುನಾಡು ರಾಜ್ಯ ದಿಂದ ಅಮದು ಮಾಡಿಕೊಳ್ಳುವುದರ ಮೂಲಕ ಕೊರತೆಯನ್ನು ಭರಿಸಬಹುದಾಗಿದೆ. ಈ ಕೊರತೆ ಯನ್ನು ನಿವಾರಿಸುವ ಸಲುವಾಗಿ ಇಂಜಾಬಿಯು ಶ್ರೀಗಂಧದ ತೋಪುಗಳನ್ನು ಬೆಳಿಸುತ್ತಿದೆ.

ಹೊಸದುರ್ಗ ತಾಲ್ಲೂಕಿನ ರಸ್ತೆಗಳಿಗೆ ಡಾಂಬರೀಕರಣ ಮಾಡುವ ವಿಚಾರ ಕುರಿತಂತೆ.

೨೩೭ ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದುರ್ಗ ತಾಲ್ಲೂಕಿನಲ್ಲೇ ಲೋಕೋಪಯೋಗಿ ರಸ್ತೆಗಳಿಗೆ ಡಾಂಬರು ಹಾಕಲು ಸರ್ಕಾರದವರು ನಿರ್ಧರಿಸಿದ್ದಾರೆಯೇ ;

ಆ) ಹೊಸದುರ್ಗ ನಗರದಲ್ಲಿರುವ ಮುಖ್ಯ ರಸ್ತೆ ಕಳೆದ ೨೦ ವರ್ಷಗಳಿಂದಲೂ ದುರಸ್ತಿ ಯಾಗದೆ ದುರಸ್ತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ರಸ್ತೆಗೆ ಡಾಂಬರು ಹಾಕಿಸಲಾಗುವುದೇ ಮತ್ತು ಹಾಗಿದ್ದಲ್ಲಿ ಯಾವಾಗ ?

ಶ್ರೀ ಹೆಚ್. ಡಿ. ದೇವೇಗೌಡ.—(ಲೋಕೋಪಯೋಗಿ ಮಂತ್ರಿ ನೀರಾವರಿ ಸಚಿವರು).—

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ೫೧೫.೫೦ ಕಿ. ಮೀ. ರಸ್ತೆ ಸೇರಿದ್ದು. ಈ ಪೈಕಿ ೧೪೯ ಕಿ. ಮೀ. ರಸ್ತೆಗೆ ಟಾರು ಹಾಕಲಾಗಿದೆ. ಉಳಿದ ಉದ್ದಕ್ಕೆ ಟಾರು ಹಾಕುವುದನ್ನು ಬರುವ ವರ್ಷಗಳಲ್ಲಿ ಹಣಕಾಸಿನ ಲಭ್ಯತೆಗಿನುಗುಣವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಆ) ಹೊಸದುರ್ಗ ನಗರದಲ್ಲಿ ಹಾದು ಹೋಗುವ ಮುಖ್ಯ ರಸ್ತೆ ಎಂದರೆ ಹುಳಿಯಾರು—ಆನೇ ಗೋಡು ರಸ್ತೆ. ಇದು ರಾಜ್ಯ ಹೆದ್ದಾರಿಯಾಗಿದ್ದು ಪುಟ್ಟಣದ ವಿಶೇಷ ಯೋಜನೆಯಲ್ಲಿ ಬರುವ ರಸ್ತೆಯ ಉದ್ದ ೨. ಕಿ. ಮೀ. ರಸ್ತೆಯನ್ನು ಪ್ರತಿವರ್ಷವೂ ನಿರ್ವಹಣೆ ಅನುದಾನದಿಂದ ನಿರ್ವಹಣೆ ಮಾಡಲಾಗು ತ್ತಿದೆ.